DECEMBER 26, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ವಿಕಸಿತ ಭಾರತ; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ ´ನ್‌ಗೆ, ಕೊಪ್ಪಳ ಜಿಲ್ಲೆಯಲ್ಲಿ, ಫಲಾನುಭವಿಗಳಿಂದ, ಸ್ವಾಗತ.
- ಸಾರ್ವಜನಿಕ ಶಿಕ್ಷಣ ಇಲಾಖೆಯ, ಬೆಳಗಾವಿ ವಿಭಾಗದ, ಎಲ್ಲ ಕಚೇರಿಗಳಲ್ಲಿ, ಇ–ಆಫೀಸ್ ತಂತ್ರಾಂಶ ಅನುಷ್ಠಾನಕ್ಕೆ, ಕ್ರಮ.
- 'ಧಾರವಾಡ ಸಂಸದರ, ಕ್ರೀಡಾ ಮಹೋತ್ಸವ, 2025'ಕ್ಕೆ, ಕುಂದಗೋಳದಲ್ಲಿ ಚಾಲನೆ.
- ಇಂದು, ವೀರ ಬಾಲ ದಿನಾಚರಣೆ; ಸಾಹಸ ಮೆರೆದ ಮಕ್ಕಳಿಗೆ, ರಾಷ್ಟ್ರಪತಿಗಳಿಂದ ಪುರಸ್ಕಾರ.

<><><>

ಈಗ ವಾರ್ತೆಗಳ ವಿವರ

<><><>

ವಿಕಸಿತ ಭಾರತ 2047; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ ´ನ್, ವಿ.ಬಿ; ಜಿ ರಾಮ ಜಿ ಎಂದು, ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು, ಕೇಂದ್ರ ಮರು ನಾಮಕರಣ ಮಾಡಿದೆ. ಗ್ರಾಮೀಣ ಕೂಲಿ ಕಾರ್ಮಿಕರ ಹಾಜರಾತಿಯ, ಬಯೋಮೆಟ್ರಿಕ್ ದೃಢೀಕರಣ, ಮೊಬೈಲ್ ಆಧಾರಿತ ಮೇಲ್ವಿಚಾರಣೆ. ನೈಜ–ಸಮಯದ ಡ್ಯಾಶ್‌ಬೋರ್ಡ್‌ಗಳು, ಕೃತಕ ಬುದ್ಧಿಮತ್ತೆ ಸಂಚಾಲಿತ, ಸಕ್ರಿಯ ವಿಶ್ಲೇ ´ಣೆ, ನಾಗರಿಕ ಭಾಗವಹಿಸುವಿಕೆ ಖಾತ್ರಿ ಪಡಿಸುವ ವೇದಿಕೆ, ಸಶಕ್ತ ಸಾಮಾಜಿಕ ಲೆಕ್ಕ ಪರಿಶೋಧನಾ ಕಾರ್ಯ ವಿಧಾನದೊಂದಿಗೆ, ನೂತನ ಕಾಯ್ದೆ, ವಿಕಸಿತ ಭಾರತ 'ಜಿ ರಾಮ ಜಿ'ಯನ್ನು, ಕೇಂದ್ರ ಅನುಷ್ಠಾನಗೊಳಿಸಿದೆ.

<><><>

ಕೊಪ್ಪಳ ಜಿಲ್ಲೆ, ಕುಕನೂರು ತಾಲೂಕು, ಬನ್ನಿಕೊಪ್ಪ ಗ್ರಾಮ ಪಂಚಾಯ್ತಿ ಅಧ್ಯಕ್ಷ, ನಾಗರಾಜ ಗಂಗರೆಡ್ಡಿ ವೆಂಕಟಾಪುರ, ಜಿ ರಾಮ್ ಜಿ ಯೋಜನೆ ಕುರಿತು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಾಗರಾಜ ಗಂಗರೆಡ್ಡಿ ವೆಂಕಟಾಪುರ ಧ್ವನಿ 60 ಸೆಕೆಂದುಗಳು

<><><>

'ಅಕ್ಕನ ಬುತ್ತಿ', ಪೌಷ್ಟಿಕ ಆಹಾರ ತಯಾರಿಕಾ ಕೇಂದ್ರ, 'ಕ್ಲೌಡ್ ಕಿಚನ್' ಪ್ರಚಾರ ಕಾರ್ಯಕ್ಕೆ, ಮಂಡ್ಯ ಜಿಲ್ಲಾ ಪಂಚಾಯಿತಿ ಸಿ.ಇ.ಓ. ನಂದಿನಿ ಚಾಲನೆ ನೀಡಿದರು. ಬೇವಿನಹಳ್ಳಿ ಗ್ರಾಮ ಪಂಚಾಯಿತಿಯ, ಸಂಜೀವಿನಿ ಮಹಿಳಾ ಒಕ್ಕೂಟದ ವಿನೂತನ ಪ್ರಯತ್ನವನ್ನು ಶ್ಲಾಘಿಸಿದರು. ರಾಜ್ಯದಲ್ಲಿಯೇ ಪ್ರಥಮ ಬಾರಿಗೆ, ಮಹಿಳಾ ಸ್ವ–ಸಹಾಯ ಸಂಘದ ಮೂಲಕ, ಸರ್ಕಾರಿ ಕಚೇರಿಗಳಿಗೆ, ವಾರದ ಆರು ದಿನ, ಮಧ್ಯಾಹ್ನಕ್ಕೆ, ರುಚಿ, ಶುಚಿ ಹಾಗೂ ಪೌಷ್ಟಿಕಾಂಶಯುಕ್ತ, ಊಟದ ಡಬ್ಬಿಗಳನ್ನು ತಲುಪಿಸುವ ಯೋಜನೆಯನ್ನು, ಮಹಿಳಾ ಒಕ್ಕೂಟ ರೂಪಿಸಿದೆ, ಎಂದರು. 'ಮೊಬೈಲ್ ನಂಬರ್ ಒತ್ತಿ, ಬರಲಿದೆ ನಿಮ್ಮ ಕಚೇರಿಗೆ ಅಕ್ಕನ ಬುತ್ತಿ' ಎಂಬ ಘೋಷ ವಾಕ್ಯದೊಂದಿಗೆ, 'ಅಕ್ಕನ ಬುತ್ತಿ' ಕಾರ್ಯಾರಂಭಿಸಿದೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಇನಾಮ ವೀರಾಪುರ ಗ್ರಾಮದಲ್ಲಿ ನಡೆದ, ಮರ್ಯಾದೆಗೇಡು ಹತ್ಯೆ ಪ್ರಕರಣದಲ್ಲಿ, ಕರ್ತವ್ಯ ಲೋಪ ಎಸಗಿರುವ, ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಮತ್ತು ಸಂತ್ರಸ್ಥ ಕುಟುಂಬಕ್ಕೆ, ಶಾಶ್ವತ ಪುನರ್ವಸತಿ ಕಲ್ಪಿಸುವಂತೆ, ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದಾಗಿ, ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ, ಎಲ್.ಮೂರ್ತಿ ತಿಳಿಸಿದ್ದಾರೆ. ಹುಬ್ಬಳ್ಳಿಯ ವಿವೇಕಾನಂದ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಯೋಗಕ್ಷೇಮ ವಿಚಾರಿಸಿ, ಅವರು ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದರು. ಸಮಾಜ ಕಲ್ಯಾಣ ಇಲಾಖೆಯಿಂದ, ಗಾಯಾಳು ಕುಟುಂಬಕ್ಕೆ, ಮೊದಲ ಹಂತದಲ್ಲಿ ಐದು ಲಕ್ಷ ರೂಪಾಯಿ ಪರಿಹಾರ ನೀಡಲಾಗಿದೆ. ದೋಷಾರೋಪ ಪಟ್ಟಿ ಸಲ್ಲಿಕೆಯಾದ ನಂತರ, ಉಳಿದ ಪರಿಹಾರ ಮೊತ್ತವನ್ನು ನೀಡಲಾಗುವುದು, ಎಂದರು.

<><><>

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕು, ಜವಗೊಂಡನಹಳ್ಳಿ ಬಳಿ, ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಿನ್ನೆ ಬೆಳಗಿನ ಜಾವ ಸಂಭವಿಸಿದ, ಖಾಸಗಿ ಬಸ್ ಅಪಘಾತದಲ್ಲಿ, ಮೃತಪಟ್ಟವರ 6 ಕುಟುಂಬಗಳಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, 5 ಲಕ್ಷ ರೂಪಾಯಿ ಹಾಗೂ ಗಾಯಗೊಂಡ 25 ಜನರಿಗೆ, 50 ಸಾವಿರ ರೂಪಾಯಿ ಪರಿಹಾರ, ಪ್ರಕಟಿಸಿದ್ದಾರೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು, ದುರ್ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತಪಟ್ಟವರ ಕುಟುಂಬಗಳಿಗೆ ಸಾಂತ್ವನ ತಿಳಿಸಿ, ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು, ಹಾರೈಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ರಾಷ್ಟ್ರೀಯ ಪರಿಹಾರ ನಿಧಿಯಿಂದ, ಮೃತರ ಅವಲಂಬಿತರಿಗೆ, 2 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ಗಾಯಗೊಂಡವರಿಗೆ, 50 ಸಾವಿರ ರೂಪಾಯಿ ನೆರವು ನೀಡುವುದಾಗಿ, ತಿಳಿಸಿದ್ದಾರೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲೂಕಿನ, ಅಜ್ಜವಾರ ಗೇಟ್ ಬಳಿ, ಟಿಪ್ಪರ್ ಮತ್ತು ದ್ವಿಚಕ್ರ ವಾಹನದ ಮಧ್ಯೆ ನಿನ್ನ ರಾತ್ರಿ ಸಂಭವಿಸಿದ ಅಪಘಾತದಲ್ಲಿ, ನಾಲ್ವರು ಅಜ್ಜವಾರ ಗ್ರಾಮದ ಕೂಲಿ ಕಾರ್ಮಿಕರು, ಮೃತಪಟ್ಟಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪೂಜ್ಯ ಗುರು ಗೋವಿಂದ ಸಿಂಗ್ ಅವರ, ನಾಲ್ವರು ಪುತ್ರರ ವೀರೋಚಿತ ಬಲಿದಾನದ ಸ್ಮರಣಾರ್ಥ, ಪ್ರತಿ ವರ್ಷ ಡಿಸೆಂಬರ್ 26 ರಂದು, *ವೀರ್ ಬಾಲ್ ದಿವಸ್* ಆಚರಿಸಲಾಗುತ್ತದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಮಧ್ಯಾಹ್ನ 12 ಗಂಟೆಗೆ, ಹೊಸ ದಿಲ್ಲಿಯಲ್ಲಿ, ರಾಷ್ಟ್ರೀಯ ಬಾಲ ಪುರಸ್ಕಾರಗಳನ್ನು ನೀಡಿ, ಗೌರವಿಸಲಿದ್ದಾರೆ. 18 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ, 20 ಸಾಹಸಿ ಮಕ್ಕಳನ್ನು, ಬಾಲ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ತಿಳಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಮಧ್ಯಾಹ್ನ 12:30ಕ್ಕೆ, ಬಾಲ ವೀರರೊಂದಿಗೆ ನಡೆಸುವ ಸಂವಾದ, ನೇರ ಪ್ರಸಾರವಾಗಲಿದೆ.

<><><>

ಸಾರ್ವಜನಿಕ ಶಿಕ್ಷಣ ಇಲಾಖೆಯ, ಬೆಳಗಾವಿ ವಿಭಾಗದ, ಎಲ್ಲ ಕಚೇರಿಗಳಲ್ಲಿ, ಪಾರದರ್ಶಕ, ತ್ವರಿತ ಕಡತ ವಿಲೇವಾರಿ ಹಾಗೂ ಆಡಳಿತ ನಿರ್ವಹಣೆಗೆ, ಇ–ಆಫೀಸ್ ತಂತ್ರಾಂಶ, ಕಡ್ಡಾಯ ಅನುಷ್ಠಾನಗೊಳಿಸಲು, ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, ಅಪರ ಆಯುಕ್ತ, ಈಶ್ವರ ಉಳ್ಳಾಗಡ್ಡಿ, ಸೂಚಿಸಿದ್ದಾರೆ. ಧಾರವಾಡದ, 'ಡಯಟ್'ನ, ಡೆಪ್ಯೂಟಿ ಚೆನ್ನಬಸಪ್ಪ ಭವನದಲ್ಲಿ, ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, 9 ಜಿಲ್ಲೆಗಳ ಅಧಿಕಾರಿಗಳೊಂದಿಗೆ ಅವರು ಸಮಾಲೋಚಿಸಿದರು. ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಉತ್ತರಕನ್ನಡ, ಶಿರಸಿ ಮತ್ತು ಚಿಕ್ಕೋಡಿ ಜಿಲ್ಲೆಗಳ, 59 ಕ್ಷೇತ್ರ ಶಿಕ್ಷಣಾಧಿಕಾರಿಗಳು, 9 ಜಿಲ್ಲೆಗಳ ಡಿ.ಡಿ.ಪಿ.ಐ. ಹಾಗೂ ಡಯಟ್ ಪ್ರಾಚಾರ್ಯರು, ಅಕ್ಷರ ದಾಸೋಹ ಯೋಜನೆಯ ಅಧಿಕಾರಿಗಳು, ಸಭೆಗೆ ವರದಿ ಮಂಡಿಸಿದರು.

<><><>

ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, ಅಪರ ಆಯುಕ್ತ, ಈಶ್ವರ ಉಳ್ಳಾಗಡ್ಡಿ.

<><><>

ಅಪರ ಆಯುಕ್ತ ಈಶ್ವರ ಉಳ್ಳಾಗಡ್ಡಿ ಧ್ವನಿ 51 ಸೆಕೆಂದುಗಳು

<><><>

ಧಾರವಾಡ ಲೋಕಸಭಾ ಕ್ಷೇತ್ರದ, 'ಸಂಸದರ ಕ್ರೀಡಾ ಮಹೋತ್ಸವ ಮಾಸಿಕ – 2025'ಕ್ಕೆ, ಕುಂದಗೋಳದಲ್ಲಿ, ವಿಜೃಂಭಣೆಯ ಚಾಲನೆ ದೊರಕಿತು. ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಕುಂದಗೋಳ ವಿಧಾನಸಭಾ ಕ್ಷೇತ್ರದ, ಕ್ರೀಡಾ ಮಹೋತ್ಸಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ, ಕೇಂದ್ರ ಸರ್ಕಾರ, ಯುವಜನತೆಯಲ್ಲಿ ಕ್ರೀಡಾ ಮನೋಭಾವವನ್ನು ಉದ್ದೀಪಿಸಲು ಹಾಗೂ ಗ್ರಾಮೀಣ ಮತ್ತು ನಗರ ಭಾಗದ ಕ್ರೀಡಾಪಟುಗಳಿಗೆ, ತಮ್ಮ ಸಾಮರ್ಥ್ಯ ಪ್ರದರ್ಶಿಸಲು ವೇದಿಕೆ, ಹಾಗೂ ಪ್ರತಿಭೆಗಳನ್ನು ಗುರುತಿಸಲು, ಸಂಸದರ ಕ್ರೀಡಾ ಮಹೋತ್ಸವ ಆಯೋಜಿಸಲಾಗಿದೆ. 2026ರ ಜನವರಿ 25ರ ವರೆಗೆ, ನಡೆಯಲಿದೆ ಎಂದರು.

<><><>

ಮಾಜಿ ಪ್ರಧಾನಮಂತ್ರಿ, ಅಟಲ್ ಬಿಹಾರಿ ವಾಜಪೇಯಿ ಅವರ, 101ನೇ ಜನ್ಮದಿನದ ಹಿನ್ನೆಲೆ, ಸುಶಾಸನ ದಿವಸ ಸಮಾರಂಭದಲ್ಲಿ, ಗಣ್ಯರು ಗೌರವ ಸಮರ್ಪಿಸಿದರು.

<><><>

ಆಕಾಶವಾಣಿಯ, ಬಹುಶ್ರುತ, 'ಮನ್ ಕಿ ಬಾತ್' ಕಾರ್ಯಕ್ರಮ, ನಾಡಿದ್ದು 28ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 129ನೇ ಆವೃತ್ತಿಯ ಮನದ ಮಾತಿಗೆ, ಸಾರ್ವಜನಿಕರಿಂದ, ಅನಿಸಿಕೆ, ಅಭಿಪ್ರಾಯ ಕಳುಹಿಸುವಂತೆ, ಕೋರಿದ್ದಾರೆ. 'ನಮೋ ಅಪ್ಲಿಕೇಶನ್' ಅಥವಾ 'ಮೈ ಗೌವ್' ಓಪನ್ ಫೋರಂ ಮೂಲಕ, ಇಂದು ರಾತ್ರಿ ಒಳಗೆ, ಜನತೆ ತಮ್ಮ ಸನಿಸಿಕೆಗಳನ್ನು, ಹಂಚಿಕೊಳ್ಳಬಹುದು.

<><><>

ಖ್ಯಾತ ಚಿತ್ರ ಕಲಾವಿದ, ಧಾರವಾಡದ, ಡಿ.ವಿ. ಹಾಲಭಾವಿ ಅವರ ಪುಣ್ಯ ಸ್ಮರಣೆ ಹಿನ್ನೆಲೆ, ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಇಂದು ಬೆಳಗ್ಗೆ 11 ಗಂಟೆಗೆ, ಧಾರವಾಡದ ಸರ್ಕಾರಿ ಕಲಾ ಮಂದಿರದಲ್ಲಿ, ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವಿಕಸಿತ ಭಾರತ; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ ನ್‌ಗೆ, ಕೊಪ್ಪಳ ಜಿಲ್ಲೆಯಲ್ಲಿ, ಫಲಾನುಭವಿಗಳಿಂದ, ಸ್ವಾಗತ.
- ಸಾರ್ವಜನಿಕ ಶಿಕ್ಷಣ ಇಲಾಖೆಯ, ಬೆಳಗಾವಿ ವಿಭಾಗದ, ಎಲ್ಲ ಕಚೇರಿಗಳಲ್ಲಿ, ಇ–ಆಫೀಸ್ ತಂತ್ರಾಂಶ ಅನುಷ್ಠಾನಕ್ಕೆ, ಕ್ರಮ.
- 'ಧಾರವಾಡ ಸಂಸದರ, ಕ್ರೀಡಾ ಮಹೋತ್ಸವ, 2025'ಕ್ಕೆ, ಕುಂದಗೋಳದಲ್ಲಿ ಚಾಲನೆ.
- ಇಂದು, ವೀರ ಬಾಲ ದಿನಾಚರಣೆ; ಸಾಹಸ ಮೆರೆದ ಮಕ್ಕಳಿಗೆ, ರಾಷ್ಟ್ರಪತಿಗಳಿಂದ ಪುರಸ್ಕಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>